E.P. No.27/2018

ಪಿ ಡಬ್ಲ್ಯೂ-1

**(ದಿನಾಂಕ 25.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಡಿಕ್ರಿ ಪರ ಶ್ರೀ B.R.G. ವಕೀಲರಿಂದಃ-**

ನಿ ಪಿ 20 ರೆವೆನ್ಯೂ ನಕಾಶೆ ಪಡೆಯಲು ಯಾವ ದಿನಾಂಕ ದಂದು ಅರ್ಜಿ ಕೊಟ್ಟಿದ್ದೆ ಎಂದರೆ ಗೊತ್ತಿಲ್ಲಾ. ದಾದಾಪೀರ, ಚಾಂದ್ ಬಾಷಾ, ಕಲಾಂ, ಅಮಾನ್, ಮೆಹಮೂದ್ ಸಹಿ ಮಾಡಿದ್ದರು. ದಾದಾಸಾಬ್ ಗೆ ಅನ್ಯಾಯ ಮಾಡುವ ಉದ್ದೇಶ ದಿಂದ ಈ ರೀತಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಹರಿಯಮ್ಮನಹಳ್ಳಿ ಸುರೇಶ್ ಗೆ ಕ್ರಯಪತ್ರ ಮಾಡಿಸಿಕೊಟ್ಟ ದಿನಾಂಕ ತಿಂಗಳು ವರ್ಷ ಎನು ಎಂದರೆ ಹೇಳಲು ಆಗುವುದಿಲ್ಲಾ. ಆ ಸಂಧರ್ಭದಲ್ಲಿ ಪಹಣಿ ಪತ್ರಿಕೆಯಲ್ಲಿ ದಾದಾಸಾಬ್ ನ ಹೆಸರು ಇತ್ತು. ನಾನು ಹಾಜರುಪಡಿಸಿರುವ ಮರಣ ಪ್ರಮಾಣ ಪತ್ರ ನಮ್ಮ ತಂದೆಯ ಮರಣ ಪ್ರಮಾಣ ಪತ್ರ ಅಲ್ಲಾ ಎಂದರೆ ಸರಿಯಲ್ಲ. ಕೊಟ್ಟೂರಿನ ವ್ಯಕ್ತಿಯ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಮಲ್ಜಾರಿ ಅರ್ಜಿಯಲ್ಲಿ ಪರಿಹಾರ ಪಡೆಯಲು ನನಗೆ ಅವಕಾಶ ಇಲ್ಲಾ ಎಂದರೆ ಸರಿಯಲ್ಲ. ಡಿಕ್ರಿದಾರನಿಗೆ ವಿಳಂಬ ಮಾಡುವ ಉದ್ದೇಶ ದಿಂದ ಮತ್ತು ನ್ಯಾಯಾಲಯದ ಸಮಯ ಹಾಳು ಮಾಡಲು ತೊಂದರೆ ಕೊಡಲು ಈ ರೀತಿ ಸ್ವ ಇಚ್ಛೆಯಿಂದ ಸೇರ್ಪಡೆ ಆಗಿರುತ್ತೇನೆ ಎಂದರೆ ಸರಿಯಲ್ಲ. ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.